ನೀರು ಕುಡಿಯಲು ಯೋಗ್ಯವಾಗಿದೆ ಎಂಬುದು ಧೃಡಪಟ್ಟಿರುತ್ತದೆ. ಹಾಲಿ ಸರಬರಾಜಾಗುತ್ತಿರುವ ನೀರು ಕುಡಿಯಲು ಯೋಗ್ಯವಾಗಿರುವುದರಿಂದ ಬದಲಿ ವ್ಯವಸ್ಥೆ ಮಾಡುವ ಅವಶ್ಯಕತೆ ಇರುವುದಿಲ್ಲ.

ಸೇಡಂ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿಯವರ ಗ್ರಾಮೀಣ ಸಂಪರ್ಕ ಯೋಜನೆ.

154(27)

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ(ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಸಂಪರ್ಕ ಯೋಜನೆಯಡಿ ಮಂಜೂರಾಗಿರುವ ರಸ್ತೆಗಳು ಯಾವ್ಯಾವು?

2. ಈ ರಸ್ತೆಗಳ ಅಂದಾಜು ಪಟ್ಟಿ ಜಿಲ್ಲಾ ಪಂಚಾಯತಿಯವರು ಮಾಡಿರುವುದು ನಿಜವಲ್ಲವೇ? ಮಾಡಿದರೆ ಆಯಾ ರಸ್ತೆಗಳ ಕಿ.ಮೀ. ಎಷ್ಟು? ಅದಕ್ಕೆ ಮಾಡಿರುವ ವೆಚ್ಚವೆಷ್ಟು?

3. ಈ ಯೋಜನೆಯಡಿಯಲ್ಲಿ ಮಂಜೂರಾಗಿರುವ ರಸ್ತೆಗಳ ಬಗ್ಗೆ ಇಲ್ಲಿಯವರೆಗೆ ಜಿಲ್ಲಾ ಪಂಚಾಯತಿಯವರು ಟೆಂಡರ್ ಕರೆಯದಿರಲು ಕಾರಣಗಳೇನು?

4. ಈ ರಸ್ತೆಗಳ ಟೆಂಡರು ಕರೆದು ಕೆಲಸ ಪ್ರಾರಂಭ ಮಾಡುವುದು ಯಾವಾಗ?

Sri M.Y.GHORPADE (Minister for Rural Development & Panchayat Raj):

1. ಪ್ರಧಾನ ಮಂತ್ರಿ ಗ್ರಾಮೀಣ ಸಂಪರ್ಕ ಯೋಜನೆಯಡಿಯಲ್ಲಿ ಸೇಡಂ ತಾಲ್ಲೂಕಿಗೆ ಸಂಬಂಧಿಸಿದ ಈ ಕೆಳಕಂಡ ರಸ್ತೆಯನ್ನು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಅ. ಮೋತ್ತಕಪಲ್ಲಿಯಿಂದ ಮೇದಕ್ (ಹೈದರಾಬಾದ್-ಬಿಜಾಪುರ) ರಸ್ತೆ ಡಾಂಬರೀಕರಣ ಮಾಡುವುದು ರೂ.60.00 ಲಕ್ಷಗಳು.

2. ಅಂದಾಜು ಪಟ್ಟಿ ಮಾಡಿರುತ್ತಾರೆ. ಈ ಕೆಳಗಿನಂತಿದೆ.

ಅ. ಮೋತಕಪಲ್ಲಿಯಿಂದ ಮೇದಕ್(ಹೈದರಾಬಾದ್-ಬಿಜಾಪುರ) ರಸ್

ಡಾಂಬರೀಕರಣ ಮಾಡುವುದು. (0.12 ಕಿ.ಮೀ) ರೂ.60.00 ಲಕ್ಷಗಳು.

ಇನ್ನುವರೆಗೆ ಯಾವುದೇ ವೆಚ್ಚ ಆಗಿರುವುದಿಲ್ಲ.

3. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಆದೇಶ ಬಂದಿದ್ದು ರಾಜ್ಯ ಸರ್ಕಾರದಲ್ಲಿ ಜಮಾ ಆಗಿರುವುದಿಲ್ಲ.

4. ಅತಿ ಶೀಘ್ರದಲ್ಲಿಯೇ ಈ ಕೆಲಸ ಪ್ರಾರಂಭಿಸಲಾಗುವುದು.

ಸೇಡಂ ಕ್ಷೇತ್ರದ ಚಿತ್ತಾಪೂರ ತಾಲ್ಲೂಕಿನ ಅಳ್ಳಳ್ಳಿ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ನಿವಾರಣೆ.

156(436)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಳ್ಳಳ್ಳಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಏಪ್ರಿಲ್-2000ಕ್ಕೆ ಅಂತ್ಯಗೊಳಿಸಿ ನೀರು ಸರಬರಾಜು ಮಾಡಲಾಗುವುದೆಂದು ತಿಳಿಸಿದ್ದು ನಿಜವಲ್ಲವೆ?

2. ಆದರೆ ಇದುವರೆಗೂ ಕುಡಿಯುವ ನೀರಿನ ಸರಬರಾಜು ಮಾಡದಿರಲು ಕಾರಣವೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1. ಹೌದು.

2. 1999-2000ನೇ ಸಾಲಿಗೆ ಹೆಚ್ಚುವರಿ ಕಾಮಗಾರಿಗಳನ್ನು ವಿಶೇಷ ಅನುದಾನದಲ್ಲಿ ಕೈಗೊಂಡಿದ್ದರಿಂದ ಸದರಿ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿದೆ. ಅಳ್ಳಳ್ಳಿ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು, ಮಾರ್ಚ್-2001ರ ಅಂತ್ಯದಲ್ಲಿ ಗ್ರಾಮಪಂಚಾಯತಿಗೆ ಹಸ್ತಾಂತರಿಸಲಾಗುವುದು.